ಇಂದು ದಿನಾಂಕಃ 24.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1 ರಿಂದ 5 ರವರ ಪರ ಶ್ರೀ ಆರ್ ಬಿ ಕೆ ವಕೀಲರಿಂದಃ

ಪ್ರತಿವಾದಿ 1 ರಿಂದ 5 ರವರ ಪರಿಚಯ ನನಗೆ ಇರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯನ್ನು ಯಾರು ಖರೀದಿ ಮಾಡಿದರು ಎಂದು ಹೇಳಿ ಬರೆಸಿರುವುದಿಲ್ಲ. ಪ್ರತಿವಾದಿ 1 ರಿಂದ 5 ರವರು ದಾವಾ ಆಸ್ತಿಯನ್ನು ಖರೀದಿ ಮಾಡಿದ ವಾರಸುದಾರರು ಎಂದು ಹೇಳಿ ಬರೆಯಿಸಿರುತ್ತೇನೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯನ್ನು ನನ್ನ ತಂದೆಯಿಂದ ಪ್ರತಿವಾದಿ 1 ರಿಂದ 4 ರವರು ನೇರವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಪ್ರಮಾಣದ ಪತ್ರದಲ್ಲಿ 5 ನೇ ಪ್ಯಾರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನಾನು ಹೇಳಿ ಬರೆಯಿಸಿರುವುದಿಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನಮೂದಿಸಿರುವ ಅಂಶಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

2. ನನ್ನ ತಂದೆ ತೀರಿಕೊಂಡು ಎಷ್ಟು ದಿನ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಆಸ್ತಿ ನನ್ನ ತಂದೆಗೆ ಹೇಗೆ ಬಂತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ತಂದೆ ದಿನಾಂಕ 24-09-2006 ರಂದು ತೀರಿಕೊಂಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಪ್ರತಿವಾದಿ 1 ರಿಂದ 4 ರವರಿಗೆ ಬರೆದುಕೊಟ್ಟಂತಹ ಖರೀದಿ ಪತ್ರವನ್ನು ಪ್ರಶ್ನಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

3. ನನ್ನ ತಾಯಿ ನನ್ನ ತಂದೆಗೆ ಆಸ್ತಿಯನ್ನು ಡ.ನಂ. 1253 ರಂತೆ ಬಿಟ್ಟುಕೊಟ್ಟಿದ್ದು ಅದನ್ನು ನಾನು ಪ್ರಶ್ನಿಸಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಪ್ರತಿವಾದಿ 1 ರಿಂದ 4 ನನ್ನ ತಂದೆಯಿಂದ ಖರೀದಿ ಮಾಡಿದ ನಂತರ ದಾವಾ ಆಸ್ತಿಯನ್ನು ಅವರು 4 ಜನ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ ಪ್ರತಿವಾದಿ 4 ರವರು ತನ್ನ ಹಿಸ್ಸೆಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ರಿಂದ 5 ರವರು ಖರೀದಿ ಮಾಡಿದ ತಮ್ಮ ತಮ್ಮ ಆಸ್ತಿಗಳ ಮೇಲೆ ಸಾಲವನ್ನು ಪಡೆದುಕೊಂಡು ಅವರೇ ವಹಿವಾಟು ಮಾಡುತ್ತಿದ್ದಾರೆ ಎಂದರೆ ಆ ಬಗ್ಗೆ ಗೊತ್ತಿರುವುದಿಲ್ಲ.

4. ರಿ.ಸ.ನಂ.57/4 ನ್ನು ನನ್ನ ಸಹೋದರರು ಚಂದ್ರಪ್ಪ ಕಲ್ಲಹನುಮಣ್ಣನವರ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿರುವುದಿಲ್ಲ. ಆ ರೀತಿ ಮಾರಾಟ ಮಾಡಿರುವಂತಹ

ಖರೀದಿ ಪತ್ರವನ್ನು ಪ್ರಶ್ನಿಸಿರುವುದಿಲ್ಲ. ಪ್ರತಿವಾದಿ 1 ರಿಂದ 4 ರವರು ನನ್ನ ತಂದೆಯಿಂದ ಖರೀದಿ ಮಾಡಿ ಅವರು ದಾವಾ ಆಸ್ತಿಗಳಲ್ಲಿ ಸ್ವಾದೀನದಲ್ಲಿ ಇದ್ದರೂ ಕೂಡ ಹೆಚ್ಚಿನ ಹಣಕ್ಕಾಗಿ ನಾನು ಮತ್ತು

ವಾದಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಸಲ್ಲಿಸಿರುವಂತಹ ಪ್ರತಿವಾದ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.